ಓ.ಎಸ್. ಸಂಖ್ಯೆ ಃ 52/2012

ದಿನಾಂಕ ಃ 02/01/2019
ಪಿ. ಡಬ್ಲ್ಯೂ. ಃ 1

<u>ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.</u>

<u>ಮಧ್ಯಂತರ ಅರ್ಜಿಯ ಆದೇಶದ  ಮೇರೆಗೆ ಮುಂದುವರೆದ ಪಾಟೀ ಸವಾಲುಃ 7 ನೇ ಪ್ರತಿವಾದಿ ಪರ ಶ್ರೀ. ಎಮ್. ಎ. ಕೆ. ಅವರಿಂದ.</u>

29. ನಾನು ವಾದ ಪತ್ರದಲ್ಲಿ ನಮ್ಮ ವಂಶಕ್ಕೆ ಸಂಭಂಧಿಸಿದ ವಂಶಾವಳಿಯನ್ನು ನೀಡಿರುವುದಿಲ್ಲ. ಈ ಕೇಸನಲ್ಲಿ 7 ನೇ ಪ್ರತಿವಾದಿ ತಮ್ಮ ಪ್ರತಿವಾದ ಪತ್ರದಲ್ಲಿ ಕಾಣಿಸಿದ ವಂಶಾವಳಿ ಸರಿ ಇರುತ್ತದೆ. ಸದರಿ ವಂಶಾವಳಿಯಲ್ಲಿ ಕಾಣಿಸಿರುವ ಎಲ್ಲರನ್ನು ಈ ಕೇಸನಲ್ಲಿ ಪಾರ್ಟಿ ಮಾಡಿರುವುದಿಲ್ಲ ಅಂದರೆ ನಿಜ. ನನ್ನ ಹಿಂದಿನ ವಿಚಾರಣೆಯಲ್ಲಿ ನಮ್ಮ ಅಜ್ಜ ಒಂದು ಮನೆ ಮತ್ತು ಒಂದು ನಿವೇಶನವನ್ನು ಬಿಟ್ಟು ಹೋಗಿರುತ್ತಾರೆ ಎಂದು ಹೇಳಿರುತ್ತೇನೆ ಅಂದರೆ ನಿಜ.

30. ನಮ್ಮ ತಂದೆ ದರ್ಗಾ ಅಬ್ದುಲ್ ಫೈಜ್ ಹತ್ತಿರ ಇದ್ದ ಒಂದು ಮನೆ ನಿವೇಶನವನ್ನು ದಿ. 27-4-1974 ರ ಕ್ರಯ ಪತ್ರದ ಮೂಲಕ ತನ್ನ ಸಹೋದರ ಗಣಪತಿ ಅವರಿಗೆ ಮಾರಿರುತ್ತಾರೆ ಅಂದರೆ ಆಗ ನಾನು ಸಣ್ಣವಳು ಇದುದ್ದದ್ದರಿಂದ ನಮ್ಮ ತಂದೆ ಆ ನಿವೇಶನವನ್ನು ಗಣಪತಿ ಅವರಿಗೆ ಶಾಲೆ ಪ್ರಾರಂಭಿಸಲು ಕೊಟ್ಟಿದ್ದರು ಎಂದು ತಿಳಿದುಕೊಂಡಿದ್ದೇನೆ ಆದರೆ ಕ್ರಯ ಪತ್ರದ ಬಗ್ಗೆ ಗೊತ್ತಿಲ್ಲ. ಆ ನಿವೇಶನವನ್ನು ಗಣಪತಿ ಅವರಿಗೆ ನೀಡಿದ ಕುರಿತು ಯಾವ ಪ್ರಕಾರದ ದಾಖಲೆಯನ್ನು ನಮ್ಮ ತಂದೆ ಮಾಡಿಕೊಟ್ಟಿದ್ದರು ಎಂದು ಗೊತ್ತಿಲ್ಲ. ನಮ್ಮ ತಂದೆ ಆ ನಿವೇಶನವನ್ನು ಶಾಲೆ ಪ್ರಾರಂಭಿಸಲು ಕೊಟ್ಟ ಬಗ್ಗೆ ನನ್ನ ಹತ್ತಿರ ದಾಖಲೆ ಇರುವುದಿಲ್ಲ.  ನಮ್ಮ ಅಜ್ಜನ ಮನೆ

ಇನ್ನೂ ಅಸ್ತಿತ್ವದಲ್ಲಿ ಇರುತ್ತದೆ ಅಲ್ಲಿ ಈಗ ಯಾರು ವಾಸ ಇರುವುದಿಲ್ಲ. ಮೊದಲು ಆ ಮನೆಯಲ್ಲಿ ಪ್ರತಿವಾದಿಯರು ವಾಸ ಇದ್ದರು. ಆ ಮನೆಯನ್ನು ಮತ್ತು ನಿವೇಶನವನ್ನು ಈ ಕೇಸನಲ್ಲಿ ಸೇರಿಸಿಲ್ಲ. ನಮ್ಮ ಅಜ್ಜ ಬಿಟ್ಟು ಹೋಗಿದ್ದ ಮನೆ ಮತ್ತು ನಿವೇಶನವನ್ನು ನಮ್ಮ ತಂದೆ ಮತ್ತು ಅವರ ಸಹೋದರ ಪಾಲು ಮಾಡಿಕೊಂಡಿರುತ್ತಾರೆ ಅಂದರೆ ಇರಬಹುದು, ಆದರೆ ನನಗೆ ಮಾಹಿತಿ ಇಲ್ಲ. ನಿವೇಶನ ನಮ್ಮ ತಂದೆಯ ಪಾಲಿಗೆ ಬಂದಿದ್ದರಿಂದ ಅದನ್ನು ತನ್ನ ತಮ್ಮ ಗಣಪತಿಗೆ ಮಾರಾಟ ಮಾಡಿದ್ದರು ಅಂದರೆ ಗೊತ್ತಿಲ್ಲ.

31. ದಾವಾ ಜಮೀನನ್ನು ಗಣಪತಿ ಜೀವಂತ ಇದ್ದಾಗಲೇ 1 ನೇ ಪ್ರತಿವಾದಿ ಸಾಗುವಳಿ ಮಾಡುತ್ತಿದ್ದರು ಅಂದರೆ ಸುಳ್ಳು. ನಮ್ಮ ತಂದೆ ಮತ್ತು ಗಣಪತಿ ಒಟ್ಟಿಗೆ ಸಾಗುವಳಿ ಮಾಡುತ್ತಿದ್ದರು. ಅವರಿಬ್ಬರೂ ಒಟ್ಟಿಗೆ ಸಾಗುವಳಿ ಮಾಡುತ್ತಿದ್ದ ಬಗ್ಗೆ ನಾನು ದಾಖಲೆ ಹಾಜರುಪಡಿಸಿಲ್ಲ.

32. ನಮ್ಮ ಚಿಕ್ಕಪ್ಪ ಗಣಪತಿ ಒಬ್ಬರೇ ಫಾರ್ಮ ನಂ. 7 ಅನ್ನು ಸಲ್ಲಿಸಿದ್ದರು ಅಂದರೆ ಅದನ್ನು ಎಲ್ಲರ ಪರವಾಗಿ ಸಲ್ಲಿಸಿದ್ದರು. ಆ ಕೇಸನಲ್ಲಿ ಅವರ ಹೆಂಡತಿ ಮಕ್ಕಳನ್ನು ಮಾತ್ರ ವಾರಸುದಾರರನ್ನಾಗಿ ಕಾಣಿಸಲಾಗಿದೆ ಅಂದರೆ ಇರಬಹುದು. ನಮ್ಮ ಅಜ್ಜ ಬಂಡೆಪ್ಪಾ 1958 ನೇ ಇಸವಿಯಲ್ಲಿ ತೀರಿಕೊಂಡರು. ಆ ವರ್ಷ ಅವರು ತೀರಿಕೊಂಡ ಬಗ್ಗೆ ದಾಖಲೆ ಇರುವುದಿಲ್ಲ, ಆದರೆ ನಮ್ಮ ಹಿರಿಯರಿಂದ ಕೇಳಿ ತಿಳಿದುಕೊಂಡಿರುವ ಆಧಾರದ ಮೇಲೆ ಅವರು 1958 ನೇ ಇಸವಿಯಲ್ಲಿ ತೀರಿಕೊಂಡರು ಎಂದು ಹೇಳಿರುತ್ತೇನೆ. ನಾನು ಹೇಳುವಂತೆ ಅವರು 1958 ನೇ ಇಸವಿಯಲ್ಲಿ ತೀರಿಕೊಂಡಿಲ್ಲ ಆದರೆ 1963 ನೇ ಇಸವಿಯಲ್ಲಿ ತೀರಿಕೊಂಡರು ಅಂದರೆ ಸುಳ್ಳು. ನಾನು ಕೊನೆಯ ಬಾರಿಗೆ ದಾವಾ ಜಮೀನಿಗೆ 1 ನೇ ಪ್ರತಿವಾದಿಯ ಜೊತೆಯಲ್ಲಿ ಜನವರಿ 2009 ನೇ ಇಸವಿಯಲ್ಲಿ ಹೋಗಿದ್ದೆ. ಈಗ 4 ಮತ್ತು 5 ನೇ

ಪ್ರತಿವಾದಿಯರು ದಾವಾ ಆಸ್ತಿಯ ಕಬ್ಜೆಯಲ್ಲಿ ಇದ್ದಾರೆ ಅಂದರೆ ನಮಗೆ ಗೊತ್ತಿಲ್ಲದ ಹಾಗೆ ಅವರು ಕಬ್ಜೆಯಲ್ಲಿ ಇರುತ್ತಾರೆ. 5 ನೇ ಪ್ರತಿವಾದಿ ಆ ಜಮೀನಿನಲ್ಲಿ ಶೆಡ್ ಕಟ್ಟಿಸಿರುತ್ತಾರೆ ಅಂದರೆ ಗೊತ್ತಿಲ್ಲ. 4 ಮತ್ತು 5 ನೇ ಪ್ರತಿವಾದಿ ಕ್ರಯ ಕರಾರು ಪತ್ರದ ಆಧಾರದ ಮೇಲೆ ಆ ಜಮೀನಿನ ಕಬ್ಜೆಯಲ್ಲಿ ಇರುತ್ತಾರೆ ಅಂದರೆ ಅದನ್ನು ನಮ್ಮ ತಿಳುವಳಿಕೆಗೆ ಬಾರದಂತೆ ಮಾಡಿರುವುದರಿಂದ ನಾವು ಈ ದಾವೆ ಮಾಡಿರುತ್ತೇವೆ. ನನಗಾಗಲಿ ನಮ್ಮ ತಂದೆಗಾಗಲಿ ದಾವಾ ಆಸ್ತಿಯಲ್ಲಿ ಯಾವುದೇ ಹಕ್ಕು ಇಲ್ಲದೇ ಇದ್ದರೂ ಸುಳ್ಳು ದಾವೆ ಮಾಡಿರುತ್ತೇನೆ ಅಂದರೆ ಸರಿಯಲ್ಲ.

(ಈ ಹಂತದಲ್ಲಿ 7 ನೇ ಪ್ರತಿವಾದಿ ವಕೀಲರು 4 ಮತ್ತು 5 ನೇ ಪ್ರತಿವಾದಿಯರ ಪರ ಮಾಡಿರುವ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ).

<u>ಮಧ್ಯಂತರ ಅರ್ಜಿಯ ಆದೇಶದ  ಮೇರೆಗೆ ಮುಂದುವರೆದ ಪಾಟೀ ಸವಾಲುಃ 1 ನೇ ಪ್ರತಿವಾದಿ ಪರ ಶ್ರೀ. ಬಿ. ಹೆಚ್. ಎಸ್. ಅವರಿಂದ.</u>

33. ನಮ್ಮ ಅಜ್ಜ ಬಂಡೆಪ್ಪನಿಗೆ 3 ಜನ ಗಂಡು ಮಕ್ಕಳು ಮತ್ತು ಇಬ್ಬರು ಹೆಣ್ಣು ಮಕ್ಕಳು ಇದ್ದರು. ಹೆಣ್ಣು ಮಕ್ಕಳ ಹೆಸರು ಕಲ್ಲಮ್ಮಾ ಮತ್ತು ಗಂಗಮ್ಮಾ. ಅವರಿಬ್ಬರಿಗೆ ಮಕ್ಕಳು ಇದ್ದರು ಅಂದರೆ ನಿಜ. ಅವರ ಪೈಕಿ ಕೆಲವರು ತೀರಿಕೊಂಡಿರುತ್ತಾರೆ. ಕಲ್ಲಮಾ ಅನ್ನುವವರಿಗೆ 6 ಜನ ಮಕ್ಕಳು ಇದ್ದು ಅವರ ಪೈಕಿ 3 ಜನ ತೀರಿಕೊಂಡಿರುತ್ತಾರೆ. ಬದುಕಿರುವವರ ಹೆಸರು ಶಾಂತರಾಜ್, ಶಾರ್ಲೆಟ್, ಕಮಲಮ್ಮಾ.  ಗಂಗಮ್ಮಾ ಅವರಿಗೆ 2 ಜನ ಗಂಡು ಮಕ್ಕಳು ಮತ್ತು 3 ಜನ ಹೆಣ್ಣು ಮಕ್ಕಳು ಇರುತ್ತಾರೆ. ಅವರ ಪೈಕಿ ಶರಣಮ್ಮಾ ಮತ್ತು ಗುಂಡಮ್ಮಾ ಅನ್ನುವವರು ಜೀವಂತ ಇದ್ದಾರೆ. ಅವರಿಬ್ಬರನ್ನು ಈ ಕೇಸನಲ್ಲಿ ಪಾರ್ಟಿ ಮಾಡಿಲ್ಲ ಅಂದರೆ ನಿಜ. ಗಂಗಮ್ಮಾನ ಮಗಳು ಚಿನ್ನಮ್ಮಾ ಅನ್ನುವವರು 2 ತಿಂಗಳ ಹಿಂದೆ ತೀರಿಕೊಂಡರು. ಕಲ್ಲಮ್ಮಾ ಮತ್ತು ಗಂಗಮ್ಮಾ ಯಾವಾಗ ತೀರಿಕೊಂಡರು ಎಂದು ಗೊತ್ತಿಲ್ಲ.

ಅವರಿಬ್ಬರು ಯಾವಾಗ ತೀರಿಕೊಂಡರು ಎಂದು ನನಗೆ ಗೊತ್ತಿದ್ದರು ಆ ವಿಷಯ ಹೇಳಿದರೆ ನನಗೆ ನಷ್ಟ ಆಗುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಾನು ಈ ಕೇಸನಲ್ಲಿ ನಮ್ಮ ತಂದೆ ಸಂಬಾಜಿ ಅವರ ವಾರಸುದಾರಳು ಇರುತ್ತೇನೆ ಎಂಬ ಹಕ್ಕಿನಿಂದ ಪಾಲು ಕೇಳಿರುತ್ತೇನೆ. ಬಂಡೆಪ್ಪಾ ತೀರಿಕೊಂಡ ನಂತರ ಅವರ ಆಸ್ತಿ ಸಂಬಾಜಿ ಅವರಿಗೆ ಬಂದಿರುವುದಿಲ್ಲ ಅಂದರೆ ಸುಳ್ಳು. ಅವರ ಆಸ್ತಿ ಸಂಬಾಜಿ ಅವರಿಗೆ ಬಂದ ಬಗ್ಗೆ ಯಾವುದೇ ದಾಖಲೆ ಇರುವುದಿಲ್ಲ ಅಂದರೆ ಸರಿಯಲ್ಲ. ಸಂಬಾಜಿ ಅವರಿಗೆ ಬಂಡೆಪ್ಪ ಅವರಿಂದ ಯಾವುದೇ ಆಸ್ತಿ ಬಾರದೆ ಇರುವುದರಿಂದ ನಾನು ಸಂಬಾಜಿ ಅವರ ವಾರಸುದಾರರಾಗಿ ಯಾವುದೇ ಆಸ್ತಿಯ ಮೇಲೆ ಹಕ್ಕು ಇರುವುದಿಲ್ಲ ಅಂದರೆ ಸರಿಯಲ್ಲ. ನಮ್ಮ ತಂದೆ ಸಂಬಾಜಿ ಜೀವಂತ ಇದ್ದಾಗ ಅವರು ದಾವಾ ಆಸ್ತಿಯಲ್ಲಿ ಕಬ್ಜೆಯಲ್ಲಿ ಇರಲಿಲ್ಲ ಮತ್ತು ಅವರು ತೀರಿಕೊಂಡ ನಂತರ ನಾವು ಯಾವತ್ತು ದಾವಾ ಆಸ್ತಿಯ ಕಬ್ಜೆಯಲ್ಲಿ ಇರಲಿಲ್ಲ ಅಂದರೆ ಸರಿಯಲ್ಲ.

34. 1 ನೇ ಪ್ರತಿವಾದಿ ಸುಂದ್ರಮ್ಮಾನಿಗೆ 3 ಜನ ಗಂಡು ಮಕ್ಕಳು ಇರುತ್ತಾರೆ ಅಂದರೆ ನಿಜ. ಅವರ ಪೈಕಿ ಜೋಯಲ್ ಅವರು ಪಾರ್ಟಿ ಮಾಡಿಲ್ಲ ಅಂದರೆ ಅವರು ತೀರಿಕೊಂಡಿರುತ್ತಾರೆ. ಅವರಿಗೆ ರೇಣುಕಾ ಎಂಬ ಹೆಂಡತಿ ಮತ್ತು ಒಂದು ಹೆಣ್ಣು ಮಗು ಇರುತ್ತಾರೆ ಅಂದರೆ ನಿಜ. 1 ನೇ ಪ್ರತಿವಾದಿಗೆ ಮಂಜುಲತಾ ಎಂಬ ಇನ್ನೊಬ್ಬ ಮಗಳು ಇರುತ್ತಾರೆ ಅಂದರೆ ನಿಜ. ಆಕೆಯನ್ನು ಈ ಕೇಸನಲ್ಲಿ ಪಾರ್ಟಿ ಮಾಡಿಲ್ಲ ಅಂದರೆ ನಿಜ. ದಾವಾ ಆಸ್ತಿ 1 ನೇ ಪ್ರತಿವಾದಿ ಸುಂದ್ರಮ್ಮಾನ ಗಂಡನಿಗೆ ಸಂಭಂಧಿಸಿರುವುದರಿಂದ ಅವರ ಎಲ್ಲಾ ಮಕ್ಕಳನ್ನು ನಾವು ಈ ಕೇಸನಲ್ಲಿ ಪಾರ್ಟಿ ಮಾಡಬೇಕಾಗಿತ್ತು ಎಂದು ಸೂಚಿಸುವುದಕ್ಕೆ ಸಾಕ್ಷಿಯು ಗಣಪತಿ ನಮ್ಮ ತಂದೆಯ ಅಣ್ಣ ಇದ್ದು ಅವರಿಗೆ ಹಣ ಕಾಸಿನ ತೊಂದರೆ ಇರುವುದರಿಂದ ಅವರು ದಾವಾ ಆಸ್ತಿಯ ಸಾಗುವಳಿ ಮಾಡಿಕೊಂಡು ಜೀವನ ಮಾಡಲು ನಮ್ಮ ತಂದೆ ಅನುಮತಿ

ಕೊಟ್ಟಿದ್ದು ಅವರ ಕಬ್ಜೆ ವಹಿವಾಟಿಗೆ ಯಾವತ್ತೂ ತೊಂದರೆ ಮಾಡಿರಲಿಲ್ಲ. ದಾವಾ ಆಸ್ತಿ ನನಗೆ ಸಂಭಂಧಿಸಿಲ್ಲ ಎಂದು ಗೊತ್ತಿದ್ದರು ಸಹ 1 ನೇ ಪ್ರತಿವಾದಿಯ ವಿರುದ್ಧ ಸುಳ್ಳು ದಾವೆ ಮಾಡಿರುತ್ತೇನೆ ಅಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ನನ್ನ ಉಕ್ತ ಲೇಖನದ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಕಂಪ್ಯೂಟರ್ ಮೇಲೆ ಬೆರಳಚ್ಚು ಮಾಡಲಾಗಿದೆ.)

ಓ ಹೆ ಕೆ ಸರಿ ಇದೆ

ಪ್ರಧಾನ ಹಿರಿಯ ಸಿವಿಲ್ ಜಡ್ಜ ಮತ್ತು ಸಿ.ಜೆ.ಎಮ್,
ಬೀದರ.